# 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಚನ್ನರಾಯಪಟ್ಟಣ.

## CC 91/2022

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ಸುರೇಶ್ | **C.W – 1** |
| ತಂದೆಯ ಹೆಸರು | ಃ | ಬಸವರಾಜು | **P.W – 3** |
| ವಯಸ್ಸು | ಃ | 36 ವರ್ಷ | |
| ಉದ್ಯೋಗ | ಃ | ಗಾರೆ ಕೆಲಸ | **ಪ್ರಮಾಣ ವಚನ ಬೋಧಿಸಲಾಯಿತು.** |
| ವಾಸ | ಃ | ಭೂವನಹಳ್ಳಿ, ವಡ್ಡರಹಳ್ಳಿ. | ದಿನಾಂಕಃ **14.08.2026** |

ಮುಖ್ಯವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ಚಾಸಾ2 ನನ್ನ ತಾಯಿ, ಚಾಸಾ–3 ರಿಂದ 5 ಗೊತ್ತು. ಆರೋಪಿ ನನ್ನ ತಂದೆ.

ದಿಃ 11.08.2021 ರಲ್ಲಿ ನಾನು ಕೆಲಸಕ್ಕೆ ಹೋಗಿದ್ದ ಸಮಯದಲ್ಲಿ ಮಧ್ಯಾಹ್ನ 03.30 ಗಂಟೆಗೆ ಚಾಸಾ–3ರವರು ನನಗೆ ಕರೆ ಮಾಡಿ, ನನ್ನ ತಂದೆಯವರು ನನ್ನ ತಾಯಿಗೆ ಹೊಡೆದಿರುವುದಾಗಿ ತಿಳಿಸಿದರು. ವಿಷಯ ತಿಳಿದು ನಾನು ಮನೆಗೆ ಬಂದು ನೋಡಿದಾಗಾ ನನ್ನ ತಾಯಿಯಾದ ಚಾಸಾ–2ರವರ ಕೈ ಮುರಿದಿತ್ತು, ನಾನು ಚಾಸಾ–2ರವರನ್ನು ನುಗ್ಗೆಹಳ್ಳಿಯ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಹೆಚ್ಚಿನ ಚಿಕಿತ್ಸೆಗಾಗಿ ಚನ್ನರಾಯಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಆಂಬ್ಯುಲೆನ್ಸ್ ನಲ್ಲಿ ಕರೆದುಕೊಂಡು ಹೋಗಿರುತ್ತೇನೆ. ಚಿಕಿತ್ಸೆ ಪಡೆದುಕೊಂಡ ನಂತರ ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ, ಸದರಿ ದಾಖಲಾತಿಯು ದೂರು ಆಗಿದ್ದು, ಅದನ್ನು ನಿಪಿ–1 ಎಂದು, ಸಾಕ್ಷಿ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು.

ದಿಃ 13.08.2021 ರಂದು ಪೊಲೀಸರು ಬೆಳಿಗ್ಗೆ 10.00 ರಿಂದ 11.00 ಗಂಟೆಯವರೆಗೆ ನಾನು ತೋರಿಸಿದ ಸ್ಥಳದಲ್ಲಿ ಮಹಜರು ಕ್ರಮ ಜರುಗಿಸಿ ಪೋಟೋವನ್ನು ತೆಗೆದಿರುತ್ತಾರೆ. ಮಹಜರು ಮಾಡುವ ಕಾಲಕ್ಕೆ ಚಾಸಾ–4 ಮತ್ತು ಚಾಸಾ–5ರವರು ಹಾಜರಿದ್ದರು. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ, ಸದರಿ ದಾಖಲಾತಿಯು ಮಹಜರು ಆಗಿದ್ದು, ಅದನ್ನು ನಿಪಿ–2 ಎಂದು, ಸಾಕ್ಷಿ ಸಹಿಯನ್ನು ನಿಪಿ–2(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ 5 ಪೋಟೋಗಳನ್ನು ತೋರಿಸಲಾಗಿ, ಸದರಿ ಪೋಟೋಗಳಲ್ಲಿ ತಾವು ಇರುವದಾಗಿ ಒಪ್ಪಿಕೊಂಡ ಮೇರೆಗೆ ಸದರಿ ಪೋಟೋಗಳನ್ನು ನಿಪಿ–3 ರಿಂದ ನಿಪಿ–7 ಎಂದು ಗುರುತಿಸಲಾಯಿತು. ಮಹಜರು ಕಾಲಕ್ಕೆ

ಪೊಲೀಸರು ಒಂದು ರಾಡ್ ಅನ್ನು ಅಮಾನತುಪಡಿಸಿಕೊಂಡಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಒಂದು ರಾಡ್ ಅನ್ನು ನೋಡಿ ಗುರುತಿಸಿರುತ್ತಾರೆ. ಸದರಿ ರಾಡ್ ಈಗಾಗಲೇ ಮು.ಮಾ. 1 ಎಂದು ಗುರುತಿಸಲಾಗಿದೆ. ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

***(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಸರ್ಕಾರಿ ಅಭಿಯೋಜಕರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)***

**ಪಾಟೀ ಸವಾಲುಃ** ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ಆರೋಪಿಯು ಚಾಸಾ-2ರವರಿಗೆ ಕಬ್ಬಿಣದ ರಾಡಿನಿಂದ ಎಡಗೈಗೆ ಹೊಡೆದಿರುವ ವಿಚಾರವನ್ನು ಚಾಸಾ-3ರವರು ನನಗೆ ತಿಳಿಸಿರುತ್ತಾರೆ ಎಂದು ನನ್ನ ದೂರಿನಲ್ಲಿ ಹೇಳಿರುತ್ತೇನೆ ಎಂದರೆ ಸರಿ. ಆರೋಪಿತನು ಚಾಸಾ-2ರವರ ತಲೆ ಕೂದಲನ್ನು ಎಳೆದಾಡಿರುತ್ತಾರೆ ಎಂದು ಚಾಸಾ-3ರವರು ನನಗೆ ತಿಳಿಸಿರುತ್ತಾರೆ ಎಂದು ನನ್ನ ದೂರಿನಲ್ಲಿ ಹೇಳಿರುತ್ತೇನೆ ಎಂದರೆ ಸರಿ. ನಾನು ದಿನಾಂಕಃ 13.08.2021 ರಂದು ಗಲಾಟೆಯ ವಿಚಾರವಾಗಿ ಪೊಲೀಸರಿಗೆ ದೂರು ನೀಡಿರುತ್ತೇನೆ ಎಂದರೆ ಸರಿ. ದಿನಾಂಕಃ 14.08.2021 ರಂದು ಪೊಲೀಸರು ಮಹಜರು ಮಾಡಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲು – ಆರೋಪಿ ಪರ ಶ್ರೀ ಟಿ.ಎಸ್.ಪಿ. ವಕೀಲರಿಂದಃ**

ನನ್ನ ತಂದೆಗೆ ನಾವು ಇಬ್ಬರು ಮಕ್ಕಳು. ನನ್ನ ಹೆಸರು ಸುರೇಶ್, ನನ್ನ ತಮ್ಮನ ಹೆಸರು ಮಂಜುನಾಥ. ಚಾಸಾ-2ರವರು ಬೇರೆಯವರ ಜೊತೆ ಸಂಸಾರ ಮಾಡುತ್ತಾರೆ ಎಂದು ಆರೋಪಿಯು ಚಾಸಾ-2ರವರ ವಿರುದ್ಧ ದೂರನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತನು ಚಾಸಾ-2ರವರ ವಿರುದ್ಧ ಜಮೀನಿಗೆ ಸಂಬಂಧಪಟ್ಟಂತೆ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಅದೇ ವಿಚಾರಕ್ಕೆ ಆಗಾಗ್ಗೆ ಆರೋಪಿಗೂ ಮತ್ತು ಚಾಸಾ-2ರವರ ಜಗಳವಾಗುತ್ತಿತ್ತು ಎಂದರೆ ಸರಿ. ಗಲಾಟೆಯ ವೇಳೆ ನಾನು ಇರಲಿಲ್ಲ. ಗಲಾಟೆಯ ವೇಳೆ ಎಷ್ಟು ಜನ ಇದ್ದರು ಎಂದು ನನಗೆ ಗೊತ್ತಿಲ್ಲ. ಚಾಸಾ-3 ನನ್ನ ನಾದಿನಿ. ಚಾಸಾ-3ರವರು ಮಧ್ಯಾಹ್ನ 02.30 ಕ್ಕೆ ಅವರ ಮೊಬೈಲ್ ನಿಂದ ಘಟನೆಯ ವಿಚಾರವನ್ನು ಕರೆ ಮಾಡಿ ತಿಳಿಸಿರುತ್ತಾರೆ. ಗಲಾಟೆಯಾದ ದಿನ ನಾನು ಬೆಳಿಗ್ಗೆ 07.00 ಗಂಟೆಗೆ ಅತ್ತಿಹಳ್ಳಿಗೆ ಗಾರೆ ಕೆಲಸಕ್ಕೆ ಹೋಗಿರುತ್ತೇನೆ. ಸದರಿ ದಿನ ಮಧ್ಯಾಹ್ನ 03.00 ಗಂಟೆಗೆ ಮನೆಗೆ ಬಂದಿರುತ್ತೇನೆ. ನಾನು ಸ್ಥಳಕ್ಕೆ ಬರುವಷ್ಟರಲ್ಲಿ ಗಲಾಟೆ ಮುಗಿದಿತು. ನಾನು ಬರುವಷ್ಟರಲ್ಲಿ ಗಲಾಟೆ ಮುಗಿದಿದ್ದ ಕಾರಣ

ಯಾರ ತಪ್ಪಿನಿಂದ ಗಲಾಟೆ ಆಗಿದೆ ಎಂದು ನನಗೆ ಗೊತ್ತಿಲ್ಲ. ಚಾಸಾ–3ರವರು ನನಗೆ ಗಲಾಟೆಯ ವಿಚಾರ ಹೇಳಿದ್ದರಿಂದ ಸದರಿ ವಿಚಾರ ಗೊತ್ತಾಯಿತು.

ನಮ್ಮ ಊರಿನಲ್ಲಿ 150 ಮನೆಗಳು ಇವೆ. ನಮ್ಮ ಊರಿನಿಂದ ನುಗ್ಗೆಹಳ್ಳಿಗೆ 7 ಕಿ.ಮೀ. ಅಂತರ ಇದೆ. ನಮ್ಮ ಊರು ನುಗ್ಗೆಹಳ್ಳಿಯ ಆಸ್ಪತ್ರೆ ಹಾಗೂ ಪೊಲೀಸ್ ಠಾಣೆಯ ಪಕ್ಕದಲ್ಲಿ ಇದೆ ಎಂದರೆ ಸರಿ. ಕಲ್ಕೆರೆ ಬಳಿ ಆಸ್ಪತ್ರೆ ಇರುವ ವಿಚಾರ ನನಗೆ ಗೊತ್ತಿಲ್ಲ. ಬಾಗೂರಿನಲ್ಲಿ ಒಂದು ಆಸ್ಪತ್ರೆ ಇದೆ ಎಂದರೆ ಸರಿ. ನಾನು ಗಲಾಟೆಯಾದ ದಿನ ಮನೆಗೆ ಬಂದು ಚಾಸಾ–2ರವರನ್ನು ನೋಡಿದಾಗಾ ಅವರ ಕೈ ತುಂಡಾಗಿ, ರಕ್ತ ಬರುತ್ತಿತ್ತು ಹಾಗೂ ಬಟ್ಟೆ ಕೂಡ ರಕ್ತದ ಕಲೆಯಿಂದ ಕೂಡಿತ್ತು. ಘಟನೆಯಿಂದ ಚಾಸಾ–2ರವರು ಯಾವ ಬಟ್ಟೆ ಧರಿಸಿದ್ದರು ಎಂದು ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಬಟ್ಟೆ ಪೂರ್ತಿ ರಕ್ತವಾಗಿತ್ತು ಎಂದು ನುಡಿದಿರುತ್ತಾರೆ.

ನಾನು ಕೆಲಸದಿಂದ ವಾಪಸ್ಸು ಮನೆಗೆ ಬೈಕಿನಲ್ಲಿ ಬಂದಿರುತ್ತೇನೆ. ನಾನು ಚಾಸಾ–2 ರವರನ್ನು ನುಗ್ಗೆಹಳ್ಳಿ ಆಸ್ಪತ್ರೆಗೆ ಆಟೋದಲ್ಲಿ ಕರೆದುಕೊಂಡು ಹೋಗಿ ತೋರಿಸಿರುತ್ತೇನೆ. ಆಸ್ಪತ್ರೆಗೆ ನಾನು, ಚಾಸಾ–2 ಮತ್ತು ಜುಂಜುನಾಥ ಹೋಗಿದ್ದೇವು. ನುಗ್ಗೆಹಳ್ಳಿ ಆಸ್ಪತ್ರೆಯಲ್ಲಿ ಸುಮಾರು 30 ನಿಮಿಷಗಳ ಕಾಲ ಇದ್ದೇವು. ನಂತರ ಅಲ್ಲಿನ ವೈದ್ಯಾಧಿಕಾರಿಗಳು ಆಂಬ್ಯುಲೆನ್ಸ್ ನಲ್ಲಿ ಚನ್ನರಾಯಪಟ್ಟಣ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತಾರೆ. ಒಂದೇ ದಿನ ನುಗ್ಗೆಹಳ್ಳಿ ಆಸ್ಪತ್ರೆ ಮತ್ತು ಚನ್ನರಾಯಪಟ್ಟಣ ಸರ್ಕಾರಿ ಆಸ್ಪತ್ರೆಗೆ ಗಲಾಟೆಯಾದ ದಿನ ಹೋಗಿರುತ್ತೇವೆ. ಆಸ್ಪತ್ರೆಯಲ್ಲಿ 10 ದಿನಗಳು ದಾಖಲಾಗಿದ್ದರು. ಚಾಸಾ–2ರವರಿಗೆ ಗಲಾಟೆಯಾದ ನಂತರ ಪ್ರಜ್ಞೆ ಇರಲಿಲ್ಲ. ಚಾಸಾ–2ರವರಿಗೆ ಘಟನೆಯ ಮಾರನೇ ದಿನ ಪ್ರಜ್ಞೆ ಬಂದಿರುತ್ತದೆ.

ನಿಪಿ–1 ಅನ್ನು ನುಗ್ಗೆಹಳ್ಳಿ ಪೊಲೀಸರು ಬರೆದಿರುತ್ತಾರೆ. ನಾನು ಮಧ್ಯಾಹ್ನ 03.30 ಗಂಟೆಗೆ ಹೋಗಿರುತ್ತೇನೆ. ನಿಪಿ–1 ಅನ್ನು ಮಂಜುನಾಥ ಪೊಲೀಸರು ಬರೆದಿರುತ್ತಾರೆ. ನಾನು ಪೊಲೀಸ್ ಠಾಣೆಯಲ್ಲಿ ಸುಮಾರು 1 ಗಂಟೆ ಕಾಲ ಇದ್ದೆ. ನಿಪಿ–1 ಅನ್ನು ಪೊಲೀಸರು ಬರೆದಿದ್ದು, ನಾನು ಅದಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ನಿಪಿ–1 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ಮಹಜರು ಕಾಲಕ್ಕೆ 4 ಜನ ಹಾಜರಿದ್ದರು. ಪೊಲೀಸರು ಮಹಜರನ್ನು ಮನೆಯ ಬಳಿ ಮಾಡಿರುತ್ತಾರೆ. ಘಟನ ಸ್ಥಳದ ಚೆಕ್ಕುಬಂಧಿ ನನಗೆ ಗೊತ್ತಿಲ್ಲ. ಮಹಜರು ಕಾಲಕ್ಕೆ ಒಬ್ಬ ಪೊಲೀಸ್ ಬಂದಿದ್ದರು. ಸಾಕ್ಷಿಗೆ **ನಿಪಿ–2 ಅನ್ನು ತೋರಿಸಲಾಗಿ, ಅದರಲ್ಲಿ ಚಾಸಾ–2ರವರ ಬಲದ ಕೈ ಮುರಿದು ಹೋಗಿರುತ್ತದೆ** ಎಂದು ಬರೆದಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಎಡಗೈ ಮುರಿದು ಹೋಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಅಲ್ಲಗಳೆದ ಭಾಗವನ್ನು **ನಿಡಿ–1** ಎಂದು ಗುರುತಿಸಲಾಯಿತು. ನನ್ನ ಮನೆ 45 ಅಡಿ

ಇರುತ್ತದೆ. ಪೂರ್ವ–ಪಶ್ಚಿಮ 30 ಅಡಿ, ಉತ್ತರ ದಕ್ಷಿಣ–40 ಅಡಿ ಇದೆ. ನಿಪಿ–2 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ನಿಪಿ–2 ಕ್ಕೆ ನಾನು ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ–2 ಅನ್ನು ಪೋಲೀಸರು ಠಾಣೆಯಲ್ಲಿ ಕುಳಿತುಕೊಂಡು ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ನಮ್ಮ ವಿರುದ್ದ ಸಲ್ಲಿಸಿದ ದೂರನ್ನು ರಾಜೀ ಮಾಡಿಸಿಕೊಳ್ಳುವ ಉದ್ದೇಶದಿಂದ ಆತನ ವಿರುದ್ದ ಸುಳ್ಳು ದೂರು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಮು.ಮಾ.1 ಅನ್ನು ಕೃತ್ಯಕ್ಕೆ ಬಳಸಿರುವ ಬಗ್ಗೆ ಗುರುತು ಇರುವುದಿಲ್ಲ. ಗಾರೆ ಕೆಲಸದಲ್ಲಿ ಕಟ್ಟಡಕ್ಕೆ ಮು.ಮಾ. 1 ರೀತಿಯ ಕಬ್ಬಿಣದ ರಾಡ್ ಗಳನ್ನು ಬಳುಸುತ್ತಾರೆ ಎಂದರೆ ಸರಿ. ಮು.ಮಾ. 1 ಅನ್ನು ಪೊಲೀಸರಿಗೆ ನಾನೇ ತಂದು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ನನಗೆ ಆರೋಪಿತನ ವಿರುದ್ದ ಸುಳ್ಳು ದೂರು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಚಾಸಾ–2ರವರಿಗೆ ಮು.ಮಾ. 1 ರಿಂದ ಯಾವುದೇ ರೀತಿ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿ ವಿರುದ್ದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಇವತ್ತು ನನ್ನ ಜೊತೆ ಚಾಸಾ–2ರವರು ಬಂದಿರುತ್ತಾರೆ ಎಂದರೆ ಸರಿ. ಪುರಷೊತ್ತಮ ಎಂಬ ವ್ಯಕ್ತಿ ನ್ಯಾಯಾಲಯಕ್ಕೆ ನಮ್ಮನ್ನು ಬಿಟ್ಟು ಹೋಗಿರುತ್ತಾರೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ .**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**Sd/-**

2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.ಚನ್ನರಾಯಪಟ್ಟಣ.